
ಕ್ರೀಡಾಂಗಣ ಇತ್ತು. ಆ ಕ್ರೀಡಾಂಗಣದೊಳಗ ಹುಡುಗರು ಫುಟ್‌ಬಾಲ್ ಆಡ್ತಿದ್ರು. ನನಗೆ ಸ್ಪಷ್ಟ ನೆನಪಿದೆ. 54 ವರ್ಷ ಆಗಿತ್ತು ಆಗ ಬೇಂದ್ರೆ ಅವ್ರಿಗೆ. ಹುಡುಗರನ್ನೆಲ್ಲಾ ನೋಡಿದ್ರು. ಎಲ್ಲಾ ಹುಡುಗ್ರಿಗು ಅವ್ರ ಪರಿಚಯ ಇತ್ತು. ಅವ್ರು ಕನ್ನಡ ಪ್ರಾಧ್ಯಾಪಕರಾದ್ರೂನು, ಹೆಚ್ಚಾಗಿ ಅವ್ರು ಅಲ್ಲಿಯ ಜನಜೀವನದಲ್ಲೇ ಬೆರೆತಿದ್ರು. ಕ್ರೀಡಾಂಗಣಕ್ಕೆ ಇಳಿದ್ರು, ಇಳಿದವ್ರೆ ಗಂಡುಗಚ್ಚೆ ಹಾಕಿದ್ರು. ಆಮೇಲೆ ಹುಡುಗ್ರು ಕೇಳಿದ್ರು 'ಏನ್ ಸರ್ ಗಂಡುಗಚ್ಚೆ ಹಾಕಿ ಕ್ರೀಡಾಂಗಣಕ್ಕೆ ಬಂದ್ರಿ.' 'ಹೇ ಫುಟ್‌ಬಾಲ್ ಆಡಬೇಕಂತ ಇಚ್ಛಾ ಆಗೇದ? ಆ್ಞಂ' ಅಂದರು ಹುಡುಗ್ರು. ಬೇಂದ್ರೆಯವ್ರು ನಗುನಗ್ತಾ ಹೋಗಿ ಗ್ರೌಂಡ್‌ನಾಗ ನಿಂತ ಮೇಲೆ ಒಬ್ಬಂವ ಕೇಳಿದ; 'ನೀವು ಎಲ್ಯಾಡಬೇಕಂತಿರಿ? ಗೋಲ್‌ಕೀಪರ್ ಆಗ್ತೀರೋ, ಫಾರ್ವರ್ಡ್ ಆಗ್ಬೇಕಂತೀರೋ? ಏನೋ ಇರ್ತಾವಲ ಇಂತಾದ್ದು ಅಂತಾದ್ದು ಆಗಬೇಕಂತಿರೋ?' ಆ ನಗೆಯೊಳಗೆ ಅವ್ರಿಗೆ ಏನ್ ಅನ್ನಿತ್ತು. 'ಮುದುಕ ಬೇಂದ್ರೆ ಆಡ್ತಾನ. ಎರಡು ನಿಮಿಷ ಸುಮ್ನೆ ಹುರುಪಲೆ ಬಂದಾನ' ಅಂತ ಅವ್ರಿಗೆ ಭ್ರಮಾ ಆಗಿತ್ತು. ಬೇಂದ್ರೆಯವ್ರು ಹೇಳಿದ್ರು ನಗನಗ್ತಾ, 'ಏನಪ್ಪಾ... ನನಗೆ ವಯಸ್ಸಾಗದ ನಿಜ, ಆದ್ರೆ ನೀವು ಎಲ್ಲಿ ಆಡು ಅಂತೀರಿ ಅಲ್ಲೇ ಆಡ್ತೇನಿ' ಅಂದ್ರು. ಆಮೇಲೆ ಸುಮ್ನೆ ಕೆಣಕಬೇಕಂತ ಒಬ್ಬ ಹುಡುಗ ಏನಂದ, 'ಇಲ್ರಿ, ಗೋಲ್ಕೀಪರ್ ಏನು ಬ್ಯಾಡ. ಫಾರ್ವರ್ಡ್ ಅಂತೇನೋ ಇರ್ತದಲ ಅದು ಆಡ್ರಿ...' 'ಆಗಲಿ' ಬೇಂದ್ರೆಯವರು ಒಂದು ಗಂಟೆಯವರೆಗೆ ಆ ವಯಸ್ಸಿನಲ್ಲಿಯೂ ದಣೀಲಾರದೆ ಆಡಿದ್ರು. ಇದು ಭಾಳ ಅದ್ಭುತವಾದ ಸಂಗತಿ. ಇಂಥಾದ್ದನ್ನು ಮಾಡಿದ್ರು ಅಂಬೋದು ಕರ್ನಾಟಕದಾಗ ಬಹಳ ಮಂದಿಗೆ ಗೊತ್ತಿಲ್ಲ. ಅವ್ರು ಸಣ್ಣವರಿದ್ದಾಗ ಆಡಿರ್ಬೋದು. ಆದ್ರೆ ಆ ದಿವಸ ಬೇಂದ್ರೆಯವರು ಅಲ್ಲಿ ಏನು ಹುಡುಗ್ರ ಮನಸ್ಸನ್ನ ಗೆದ್ರು, ಪ್ರಾಧ್ಯಾಪಕರ ಮನಸ್ಸನ್ನ ಗೆದ್ರು, ಇದು ಬಹಳ ಅದ್ಭುತವಾಗಿತ್ತು.

★★★



ಹಾಗೆ ಒಂದು ಸಲ ಏನಾಯ್ತು ಅಂತಂದ್ರ ಹೀಗೆ ನಾವು ಅಡ್ಡಾಡ್ತಾ ಇರೊ ಮುಂದ ಒಂದು ಸಲ ಯಾವುದೊ ಒಂದು ಬ್ಯಾಂಕ್ ಇರೊ ದಾರಿನಾಗ ಬಂದ್ವಿ. ಆ ಬ್ಯಾಂಕಿನಲ್ಲಿ ಬೇಂದ್ರೆಯವರ ವ್ಯವಹಾರ ಖಾತೆ ಇರ್ಲಿಲ್ಲ. ದಯಾನಂದ ಕಾಲೇಜಿನವರ ಬ್ಯಾಂಕ್ ವ್ಯವಹಾರ ಎಲ್ಲಾ ಅಲ್ಲೆ. ಬೇಂದ್ರೆಯವರ ವ್ಯವಹಾರ ಎಲ್ಲಾ ನೋಡ್ಕೋತಾ ಇದ್ದದ್ದು ಬೇರೆ ಯಾರೊ. ವ್ಯವಹಾರ ಅನ್ನಲಿಕ್ಕೇನು ದೊಡ್ಡ ವ್ಯವಹಾರ ಏನು ಇದ್ದಿದ್ದಿಲ್ಲ. ಬೇಂದ್ರೆಯವ್ರು ಸಹ ಬ್ಯಾಂಕಿಗೆ ಹೋಗ್ತಿದ್ದಿಲ್ಲ. ಆದ್ರೆ ಅವತ್ತು ಅವ್ರಿಗೆ ಆ ಬ್ಯಾಂಕಿನಲ್ಲೊಂದು ಖಾತೆ ತೆರೀಬೇಕು ಅನ್ನೋ ವಿಚಾರ ತಲೆಯೊಳಗೆ ಬಂತು. ಬೇಂದ್ರೆಯವ್ರು ಬ್ಯಾಂಕಿನೊಳಗ ಹೊಕ್ರು. ಒಳಗ ಹೊಕ್ರ, ಬೇಂದ್ರೆಯವ್ರ ಪರಿಚಯ ಜನರಿಗೆ ಇತ್ತು; ಅಂದ್ರೆ ಅಲ್ಲಿಯ ಗ್ರಾಹಕರು ಎದ್ದು ನಿಂತ್ರು, 'ಬೇಂದ್ರೆ ಬಂದಾರ... ಬೇಂದ್ರೆ ಬಂದಾರ...' ಅಂತ. ಒಳಗಿನ ಸಿಬ್ಬಂದಿ ಗೌರವದಿಂದ ಎದ್ದು ನಿಂತ್ರು ಬೇಂದ್ರೆಯವ್ರು ಬಂದಾರ ಅಂತ. ಬೇಂದ್ರೆಯವ್ರ ದನಿ ಕೇಳಿ ಮ್ಯಾನೇಜರ್